ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ
ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

ಸಹಯೋಗ : ವಿವಿಧ ಸಂಘ ಸಂಸ್ಥೆಗಳು, ಹೆಚ್.ಡಿ. ಕೋಟೆ ತಾಲ್ಲೂಕು

# ಕುಡಿತ ಬಿಡಿಸುವ 13ನೆಯ ಉಚಿತ ಶಿಬಿರ ಸಮಾರೋಪ

**3 ಅಕ್ಟೋಬರ್ 2022 * ಸೋಮವಾರ * ಬೆಳಗ್ಗೆ 11.00**
**ಜೆಎಸ್‌ಎಸ್ ಮಂಗಳ ಮಂಟಪ, ಹೆಚ್.ಡಿ. ಕೋಟೆ**

## ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಸಮ್ಮುಖ

**ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲ್ಲೂಕಿನ ಮಠಾಧಿಪತಿಗಳು**

## ಅಧ್ಯಕ್ಷತೆ

**ಶ್ರೀ ಅನಿಲ್ ಚಿಕ್ಕಮಾದು**, ವಿಧಾನಸಭಾ ಸದಸ್ಯರು

## ಸಮಾರೋಪ ಭಾಷಣ

**ಶ್ರೀ ಮಲ್ಲಿಕಾರ್ಜುನ ಬಿ. ತುಬಾಕಿ**
ಅಧ್ಯಕ್ಷರು, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ

## ಮುಖ್ಯ ಅತಿಥಿಗಳು

**ಶ್ರೀ ಎಂ. ಶಿವಣ್ಣ**, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ
**ಶ್ರೀಮತಿ ಅನಿತಾ ನಿಂಗನಾಯಕ**, ಅಧ್ಯಕ್ಷರು, ಪುರಸಭೆ, ಹೆಚ್.ಡಿ.ಕೋಟೆ
**ಶ್ರೀಮತಿ ಕೆ.ಆರ್. ರತ್ನಾಂಬಿಕ**, ತಹಸೀಲ್ದಾರರು, ಹೆಚ್.ಡಿ.ಕೋಟೆ
**ಶ್ರೀ ಕೆ.ಎಂ. ರವಿಪ್ರಸಾದ್**, ಡಿವೈಎಸ್‌ಪಿ, ಹುಣಸೂರು

**ಸರ್ವರಿಗೂ ಸುಸ್ವಾಗತ**

ಒಬ್ಬ ವ್ಯಕ್ತಿಯು ಕುಡಿತಕ್ಕೆ ದಾಸನಾದರೆ ಅದರಿಂದ ಅನೇಕ ದುಷ್ಪರಿಣಾಮಗಳು ಉಂಟಾಗುತ್ತವೆ. ವ್ಯಕ್ತಿಯ ಘನತೆ ಹಾಗೂ ಆರೋಗ್ಯಕ್ಕೆ ಕುಂದುಂಟಾಗುತ್ತದೆ. ಸಮಾಜ ಹಾಗೂ ಸಮುದಾಯಗಳ ಸ್ವಾಸ್ಥ್ಯವೂ ಹದಗೆಡುತ್ತದೆ. ಕುಡಿತದ ಸಮಸ್ಯೆಯಿಂದ ಸಮಾಜದ ಮೇಲೆ ಆಗುವ ಪರಿಣಾಮಗಳಿಗಿಂತಲೂ ಕುಟುಂಬ ಮತ್ತು ಉದ್ಯೋಗದ ಸ್ಥಳಗಳಲ್ಲಿ ಹೆಚ್ಚು ತೊಂದರೆಯಾಗುತ್ತದೆ. ಕುಡಿತದಿಂದ ವ್ಯಕ್ತಿಯ ಆರೋಗ್ಯದಲ್ಲಿ ಅನೇಕ ಸಮಸ್ಯೆಗಳು ಕಾಣಿಸಿಕೊಳ್ಳುವುದರ ಜೊತೆಗೆ ಅಕಾಲಮೃತ್ಯುವೂ ಸಂಭವಿಸಬಹುದು.

ಕುಡಿತದಿಂದಾಗುವ ಸಮಸ್ಯೆಗಳ ಬಗ್ಗೆ ಮದ್ಯವ್ಯಸನಿಗಳಿಗೆ ಅರಿವು ಮೂಡಿಸುವ ಸಲುವಾಗಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಆಶೀರ್ವಾದಗಳೊಂದಿಗೆ ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳು ಮತ್ತು ದಾನಿಗಳ ಸಹಯೋಗದಿಂದ, ಕುಡಿತ ಬಿಡಿಸುವ ಉಚಿತ ಶಿಬಿರಗಳನ್ನು ವಿವಿಧ ಕಡೆಗಳಲ್ಲಿ ಆಯೋಜಿಸಲಾಗುತ್ತಿದೆ.

ಮದ್ಯವ್ಯಸನಿಗಳಿಗೆ ಅರಿವು ಮೂಡಿಸಲು 2014 ರಿಂದ ಕುಡಿತ ಬಿಡಿಸುವ ಉಚಿತ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಮೊದಲನೆಯದರಲ್ಲಿ 44, ಎರಡನೆಯದರಲ್ಲಿ 77, ಮೂರನೆಯದರಲ್ಲಿ 66, ನಾಲ್ಕನೆಯದರಲ್ಲಿ 95, ಐದನೆಯದರಲ್ಲಿ 100, ಆರನೆಯದರಲ್ಲಿ 109, ಏಳನೆಯದರಲ್ಲಿ 47, ಎಂಟನೆಯದರಲ್ಲಿ 34, ಒಂಬತ್ತನೆಯದರಲ್ಲಿ 34, ಹತ್ತನೆಯದರಲ್ಲಿ 58, ಹತ್ತನೆಯದರಲ್ಲಿ 56 ಮತ್ತು ಹನ್ನೆರಡನೆಯದರಲ್ಲಿ 31 ಹೀಗೆ ಒಟ್ಟು 751 ಮದ್ಯವ್ಯಸನಿಗಳು ಭಾಗವಹಿಸಿ ಅನುಕೂಲ ಪಡೆದಿರುತ್ತಾರೆ.

ಹದಿಮೂರನೆಯ ಶಿಬಿರವನ್ನು **ಸೆಪ್ಟೆಂಬರ್ 24 ರಿಂದ ಅಕ್ಟೋಬರ್ 3, 2022 ರವರೆಗೆ ಹೆಚ್.ಡಿ.ಕೋಟೆಯ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ** ಏರ್ಪಡಿಸಿದೆ. ಈ ಶಿಬಿರದಲ್ಲಿ 58 ಮದ್ಯವ್ಯಸನಿಗಳು ಭಾಗವಹಿಸಿ ಶಿಬಿರ ಯಶಸ್ವಿಯಾಗಿದೆ. ಶಿಬಿರದ ಅವಧಿಯಲ್ಲಿ ಪ್ರತಿದಿನ ವ್ಯಾಯಾಮ, ಧ್ಯಾನ, ಆರೋಗ್ಯ ತಪಾಸಣೆ, ಉಪನ್ಯಾಸ, ವಿಚಾರ ವಿನಿಮಯ ಮತ್ತು ಆಪ್ತಸಮಾಲೋಚನೆ ನಡೆಯುತ್ತಿವೆ.

ಕುಡಿತದ ಸಮಸ್ಯೆಯಿಂದ ಮುಕ್ತರಾಗಬಯಸುವವರಿಗೆ ಹೆಚ್ಚುವರಿ ಸಮಾಲೋಚನೆಗಾಗಿ, ಶಾಲಾ ಮತ್ತು ಕಾಲೇಜುಗಳಲ್ಲಿ ಯುವಕರಿಗೆ ಕುಡಿತ ಮತ್ತು ಮಾದಕವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಿಳಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಮದ್ಯವ್ಯಸನಿಗಳ ಪುನಶ್ಚೇತನಕ್ಕಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ **'ಜೆಎಸ್‌ಎಸ್ ಆಪ್ತ ಸಮಾಲೋಚನಾ ಕೇಂದ್ರ'**ವನ್ನು ಪ್ರಾರಂಭಿಸಲಾಗಿದೆ. ಇದರ ಉಪಯೋಗ ಪಡೆಯಬಯಸುವವರು ಆಪ್ತಸಮಾಲೋಚನೆಗೆ ನೇರವಾಗಿ ಅಥವಾ ನಿಗದಿತ ಸಮಯದಲ್ಲಿ ಆನ್‌ಲೈನ್ ಮೂಲಕವೂ ಭಾಗವಹಿಸಬಹುದು.

ಮದ್ಯವ್ಯಸನಿಗಳು ಆಪ್ತಸಮಾಲೋಚನೆ ಹಾಗೂ ಮುಂದಿನ ಶಿಬಿರಗಳ ಬಗೆಗಿನ ಮಾಹಿತಿಗಾಗಿ ಡಾ. ಎಂ.ಪಿ. ಸೋಮಶೇಖರ್ ಮತ್ತು ಶ್ರೀ ಎಸ್. ಬಸವರಾಜುರವರು ಗಳನ್ನು ಕ್ರಮವಾಗಿ 9448653897, 9886476142 ದೂರವಾಣಿಗಳಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.